ಶ್ರೀ ರಾಮಕೃಷ್ಣ ಹೆಗಡೆ.—ಇವರನ್ನು ನೇಮಕ ಮಾಡುವಾಗ ಈ ವಿಚಾರ ಗೊತ್ತಿರಲಿಲ್ಲ. ಇದರಲ್ಲಿ ಸಂಶಯ ಬರತಕ್ಕಂಥ ಯಾವ ದೊಡ್ಡ ವಿಚಾರ ಇದೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಸಂಶಯ ಬರತಕ್ಕಂಥ ಯಾವುದೇ ವಿಚಾರ ಇದರಲ್ಲಿ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಕಾದೂರ್‌ರವರ ಬಗ್ಗೆ ಅಕ್ಕರೆ ಇಲ್ಲದ್ದಾಗಿದೆ. ಅದು ಕಾಂಪ್ಲಿಕೇಷನ್ ಬರಬಹುದಾದ್ದು ಆಗಿದೆ ಆದ್ದರಿಂದ ಅವರಿಗೆ ಬದಲು ಬೇರೆಯವರನ್ನು ಯಾರನ್ನಾದರೂ ಅಪಾಯಿಂಟ್ ಮಾಡಿ. ಅವರ ಮಗ ಅಲ್ಲಿ ವಕೀಲರು ಸಂತೋಷ ಹೆಗಡೆಯವರು ನಿಮ್ಮ ಮಗ ಭರತ್ ಹೆಗಡೆಯವರಿಗೆ ಲಾಯರ್ ಆಗಿದ್ದಾರೆ. ಆದ್ದರಿಂದ ನೀವು ಅವರಿಗೆ ಬದಲಾಗಿ ಬೇರೆಯವರನ್ನು ನೇಮಕ ಮಾಡಿದರೆ ಅದಕ್ಕೆ ಯಾವ ಸಂಶಯಕ್ಕೂ ಆಸ್ಪದ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಜಸ್ಟೀಸ್ ಕಾದೂರ್‌ರವರನ್ನು ನಾವು ಕೇಳಿದ್ದಾಯಿತು. ಅದಕ್ಕೆ ಅವರೂ ಒಪ್ಪಿಕೊಂಡು ಈ ಕೆಲಸವನ್ನು ನಾನು ಮಾಡುತ್ತೇನೆಂದು ಆ ಜವಾಬ್ದಾರಿಯನ್ನು ಹೊತ್ತ ಮೇಲೆ ಮತ್ತೆ ಈಗ ನಾವು ಅವರನ್ನು ಬದಲಾಪಣೆ ಮಾಡುವುದು ಸರಿಯಲ್ಲ ಒಂದುವೇಳೆ ಅವರಾಗಿ ಅವರೇ ನಾನು ಈ ಕೆಲಸವನ್ನು ಮಾಡುವುದಿಲ್ಲ ಎಂದು ಹೇಳಿದರೆ ಆಗ ನಾವು ಬೇರೆಯವರನ್ನು ನೇಮಕ ಮಾಡಬಹುದು.

## ಕ.ರಾ ರ.ಸಾ. ಸಂಸ್ಥೆಯವರಿಂದ ಆದ ಅಪಘಾತಗಳು ಹಾಗೂ ನೀಡಿದ ಪರಿಹಾರ ಧನ

೧೫೪೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸಾರಿಗೆಯ ಎಷ್ಟು ಬಸ್ಸುಗಳು ಅಪಘಾತಕ್ಕೆ ಒಳಗಾಗಿವೆ ?

ಆ) ಈ ಅಪಘಾತಗಳಿಂದ ಸಾರಿಗೆ ಸಂಸ್ಥೆಗೆ ಆಗಿರುವ ನಷ್ಟವೆಷ್ಟು ?

ಇ) ಈ ಅಪಘಾತಗಳಿಂದ ಮಡಿದಿರುವವರ ಸಂಖ್ಯೆ ಎಷ್ಟು ಮತ್ತು ಸರ್ಕಾರವು ಇವರುಗಳಿಗೆ ಕೊಟ್ಟಿರುವ ಪರಿಹಾರ ಧನದ ಮೊತ್ತವೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಮಂತ್ರಿಗಳು).—

| ಅ) ವರ್ಷ | ಅಪಘಾತಕ್ಕೊಳಗಾದ ಬಸ್ಸುಗಳ ಸಂಖ್ಯೆ |
|---|---|
| ೧೯೮೫-೮೬ | ೧೮೨೦ |
| ೧೯೮೬-೮೭ | ೧೮೪೯ |
| ೧೯೮೭-೮೮ | ೨೦೪೧ |

| ಆ) ವರ್ಷ | ಮೊತ್ತ (ರೂ.ಗಳಲ್ಲಿ) |
|---|---|
| ೧೯೮೫-೮೬ | ೨೦೦,೨೦,೫೪೪-೩೪ |
| ೧೯೮೬-೮೭ | ೨೫೦,೩೬,೯೭೮-೫೧ |
| ೧೯೮೭-೮೮ | ೪೨೮,೧೯,೯೩೪-೦೯ |

| ೫) ವರ್ಷ | ಸತ್ತವರ ಸಂಖ್ಯೆ | ಪರಿಹಾರ ಧನ ಮೊತ್ತ (ರೂ). |
|---|---|---|
| ೧೯೮೫–೮೬ | ೩೪೦ | ೧೫೦,೫೬,೯೫೩–೦೦ |
| ೧೯೮೬–೮೭ | ೩೪೬ | ೨೨೯,೫೨,೧೩೦–೦೦ |
| ೧೯೮೭–೮೮ | ೪೧೪ | ೪೦೬.೦೭,೭೩೫–೦೦ |

ಶ್ರೀ ವೇದಾಂತ ಹೆಬ್ಬಿಗೆ.–ಸ್ವಾಮಿ ೧೯೮೫–೮೬ರಲ್ಲಿ ೧೮೨೦ ಅಪಘಾತಗಳಾಗಿದ್ದರೆ ೧೯೮೭–೮೮ರಲ್ಲಿ ೨೦೪೧ ಅಪಘಾತಗಳಾಗಿವೆ. ಅಂದರೆ ಅಪಘಾತದ ಸಂಖ್ಯೆ ಜಾಸ್ತಿಯಾಗಿದೆ. ೧೯೮೫–೮೬ರಲ್ಲಿ ೨೦೦ ಲಕ್ಷ ಜಿಲ್ಲರೆ ನಷ್ಟವಾಗಿದ್ದರೆ ೧೯೮೭–೮೮ರಲ್ಲಿ ೪೨೮ ಲಕ್ಷ ಜಿಲ್ಲರೆ ನಷ್ಟವಾಗಿದೆ. ಅದೇ ರೀತಿ ಈ ಅಪಘಾತಗಳಿಂದ ಸತ್ತವರ ಸಂಖ್ಯೆ ೧೯೮೫–೮೬ರಲ್ಲಿ ೩೪೦ ಇದ್ದರೆ ೮೭–೮೮ರಲ್ಲಿ ೪೧೪ಕ್ಕೆ ಏರಿದೆ. ನಾನು ತಮ್ಮನ್ನು ಕೇಳುತ್ತೇನೆ. ಈ ಅಪಘಾತಗಳಲ್ಲಿ ಚಾಲಕನು ಗುಂಡಿನ ಮತ್ತಿನಲ್ಲಿದ್ದಾಗ ಎಷ್ಟು ಅಪಘಾತಗಳಾಗಿವೆ ? ಮತ್ತು ಚಾಲಕ ಸರಿಯಾದ ರೀತಿಯಲ್ಲಿ ಇದ್ದಾಗ ಎಷ್ಟು ಅಪಘಾತಗಳಾಗಿವೆ ಎಂಬುದನ್ನು ಹೇಳುತ್ತೀರಾ ? ಇಷ್ಟೊಂದು ಜಾಸ್ತಿ ಅಪಘಾತಗಳಾಗುವುದಕ್ಕೆ ಮೂಲ ಕಾರಣ ಏನು ಎಂಬುದನ್ನು ಇದುವರೆಗೆ ನೀವು ವಿಚಾರಿಸಿರೂ ಸಮೀಕ್ಷೆಯನ್ನು ಮಾಡಿದ್ದೀರಾ ? ಇಲ್ಲಿ ತಾವು ಸತ್ತವರ ಸಂಖ್ಯೆಯನ್ನು ಹೇಳಿದ್ದೀರಿ ; ಮತ್ತು ಅವರ ಕುಟುಂಬದವರಿಗೆ ಕೊಟ್ಟಿರತಕ್ಕ ಪರಿಹಾರವನ್ನೂ ತೋರಿಸಿದ್ದೀರಿ. ಆದರೆ ಈ ಅಪಘಾತಗಳಲ್ಲಿ ಸಾಯದೆ ಅಂಗವಿಕಲರು ಆಗಿ ಯಾರಿದ್ದಾರೆ ಅವರಿಗೆ ಏನು ಪರಿಹಾರವನ್ನು ಕೊಟ್ಟಿದ್ದೀರಿ ? ಮತ್ತು ಅನೇಕ ಗಂಡಸರು ಸತ್ತಿರುವುದರಿಂದ ಅವರ ಹೆಂಡತಿಯವರು ವಿಧವೆಯರು ಆಗಿದ್ದಾರೆ ಅವರು ಜೀವನ ಮಾಡುವುದಕ್ಕೆ ನೀವು ಏನು ದಾರಿಯನ್ನು ಮಾಡಿಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಚಾಲಕರು ಗುಂಡಿನ ಮತ್ತಿನಲ್ಲಿದ್ದಾಗ ಅಂದರೆ ಕುಡಿದಿದ್ದಾಗ ಎಷ್ಟು ಅಪಘಾತಗಳಾಗಿವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗ ನನ್ನ ಹತ್ತಿರ ಆ ವಿವರ ಇಲ್ಲ. ಆ ಮೇಲೆ ಅದನ್ನು ಮಾನ್ಯ ಸದಸ್ಯರಿಗೆ ವಿವರ ಒದಗಿಸುತ್ತೇನೆ.

ಇನ್ನು ಕೊಟ್ಟಿರತಕ್ಕ ಪರಿಹಾರಧನ ಏನಿದೆ ಇದು ಕೇವಲ ಸತ್ತವರ ಕುಟುಂಬದವರಿಗೆ ಮಾತ್ರವಲ್ಲ ಅಂಗವಿಕಲರಿಗೂ ಸಹ ಟ್ರಿಬ್ಯುನಲ್ ತೀರ್ಪಿನ ಪ್ರಕಾರ ಮತ್ತು ಇತ್ತೀಚೆಗೆ ಮಾಡಿರತಕ್ಕ ಲೋಕ್ ಅದಾಲತ್ ತೀರ್ಪಿನ ಪ್ರಕಾರ ಸತ್ತವರ ಕುಟುಂಬದವರಿಗೆ, ಅಂಗವಿಕಲರಿಗೆ, ನಾವು ಪರಿಹಾರವನ್ನು ಕೊಟ್ಟಿದ್ದೇವೆ.

ಇನ್ನು ಈ ಅಪಘಾತಗಳಿಗೆ ಮೂಲ ಕಾರಣವನ್ನು ಸಮೀಕ್ಷೆ ಮಾಡಿದ್ದೀರಾ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ನನ್ನ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಉತ್ತರವನ್ನು ಹೇಳಿಂವಾಗ ನಮ್ಮ ಇಲಾಖೆಯ ಪತಿಯಿಂದ ಮತ್ತು ಮೋಟಾರು ವಾಹನಗಳ ಇಲಾಖೆಯ ಮೂಲಕ ಈ ಅಪಘಾತಗಳನ್ನು ಯಾವ ರೀತಿ ತಡೆಯಬುವುದಕ್ಕೆ ಸಾಧ್ಯ, ಯಾವ ರೀತಿ ಕಡಿವೆಂ ಮಾಡುವುದಕ್ಕೆ ಸಾಧ್ಯ ಎಂಬುದನ್ನು ತಿಳಿಸುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ಸಾಮಾನ್ಯವಾಗಿ ಜನರಲ್ಲಿ 'ರಸ್ತೆ ಸಾರಿಗೆ ಸಂಸ್ಥೆ' ಎಂದರೆ ಏನು ಭಾವನೆ ಬಂದಿದೆ ಎಂದರೆ 'ರಸ್ತೆಯಲ್ಲಿ ಸಾಯಿಸುವ ಸಂಸ್ಥೆ' ಎಂದು, ಇದು ಸಾಮಾನ್ಯವಾಗಿ ಎಲ್ಲ ಜನರ ಮನಸ್ಸಿನಲ್ಲೂ ಇರತಕ್ಕ ಭಾವನೆ. ಇದು ಹೋಗಬೇಕು. ಇನ್ನು ಮುಂದೆ ಈ ಅಪಘಾತಗಳು ಕಡಿಮೆಯಾಗಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಸಾರಿಗೆ ಸಂಸ್ಥೆಯ ಬಸ್ಸನ್ನು ಹತ್ತಿದ ಮೇಲೆ ನಾನು ಚನ್ನಪಟ್ಟಣಕ್ಕೇ ಹೋಗುತ್ತೇನೋ, ಮೈಸೂರಿಗೇ ಹೋಗುತ್ತೇನೋ, ಅಥವಾ ಇನ್ನೆಲ್ಲಿಗೆ ಹೋಗುತ್ತೇನೋ ಗೊತ್ತಿಲ್ಲ. ಆದ್ದರಿಂದ ಈ ಜನರು ನಿಮ್ಮ ಬಸ್ ಹತ್ತುವುದಕ್ಕೆ ಮುಂಚೆಯೇ ಇನ್‌ಷ್ಯೂರೆನ್ಸ್ ವ್ಯವಸ್ಥೆಯನ್ನೇನಾದರೂ ಮಾಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇನ್‌ಷ್ಯೂರೆನ್ಸ್ ಸ್ಕೀಂನ ಬಗ್ಗೆ ಈಗಾಗಲೇ ನಮ್ಮ ಸಂಸ್ಥೆಯವರು ಪರಿಶೀಲನೆಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಕಳೆದವಾರ ನಾನು ತಿಳಿಸಿದ್ದೇನೆ.